ದಿನಾಂಕ: 05.06.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಂ ವಿ ವಕೀಲರಿಂದಃ**

ಓಎಸ್ ನಂ.8/2021 ರಲ್ಲಿ ನನ್ನ ಅಣ್ಣ, ನನ್ನ ತಾಯಿ ಮತ್ತು ಇಬ್ಬರು ಅಕ್ಕಂದಿರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಿರ್ಬಂಧಕಾಜ್ಞೆಯನ್ನು ನನ್ನ ಅಣ್ಣನ ಮೇಲೆ ಕೋರಿರುತ್ತೇನೆ. 10.06.2022 ರಂದು ದಾವಾಸ್ತಿಯನ್ನು ಮಾರಾಟ ಮಾಡಬಾರದು ಎಂದು ತಾತ್ಕಾಲಿಕ ನಿರ್ಭಂಧಕಾಜ್ಞೆಯಾಗಿದ್ದು ಆದೇಶವನ್ನು ಉಲ್ಲಂಘನೆ ಮಾಡಿ ಆದರೂ ಕೂಡ ನನ್ನ ಅಣ್ಣ ಮತ್ತು ಅತ್ತಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ನನಗೆ ಭಾಗ ಕೊಡದೇ ದಾವಾಸ್ತಿಯನ್ನು ಮಾರಾಟ ಮಾಡಿ ಅದೇಶ ಉಲ್ಲಂಘನೆ ಮಾಡಿರುತ್ತಾರೆ. ಈ ಕುರಿತು ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. 07.07.2022 ರಂದು ನಮ್ಮ ವಕೀಲರು ಸಿ ಪಿ ಸಿ ಕಲಂ.152 ರ ಪ್ರಕಾರ ಅರ್ಜಿಯನ್ನು ಸಲ್ಲಿಸಿ ಆದೇಶ ಭಾಗವನ್ನು ತಿದ್ದುಪಡಿ ಮಾಡಲು ಕೇಳಿಕೊಂಡ ಅರ್ಜಿಗೆ 1 ನೇ ಅರ್ಜಿದಾರರು ತಕರಾರು ಸಲ್ಲಿಸಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ಯಾವುದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಸಲ್ಲಿಸಿದ್ದ ತಕರಾರು ಅರ್ಜಿಯಲ್ಲಿ ಬರೆದ ವಿಚಾರ ನನಗೆ ಗೊತ್ತಿರುತ್ತದೆ. ಎದುರುದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನಿಜ. ಎದುರುದಾರರು ಯಾವುದೇ ತಪ್ಪು ಮಾಡದಿದ್ದರೂ ಸಹ ಅವರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು